# ಸುಳ್ಳು ಮತ್ತು ಭ್ರಮೆಯ ಸುತ್ತ

ಮುಂದುವರೆದ ದೇಶಗಳಲ್ಲಿ ಚುನಾವಣೆಗಳು ನಡೆಯುವಾಗ ರಾಜಕೀಯ ಪಕ್ಷಗಳು ತಯಾರಿಸುವ ಪ್ರಣಾಳಿಕೆಗಳಲ್ಲಿ ವರ್ತಮಾನದ ಸವಾಲುಗಳನ್ನು ಎತ್ತಿಕೊಳ್ಳುವುದರ ಜೊತೆಗೆ ಮುಂದಿನ ಪೀಳಿಗೆಗೆ ಅಂದರೆ ಮಕ್ಕಳಿಗೆ ನಾವು ಏನನ್ನು ಕೊಡಬೇಕು, ಅವರ ಬೆಳವಣಿಗೆಗೆ ಮಾರ್ಗಸೂಚಿಗಳನ್ನು ಹೇಗೆ ರೂಪಿಸಬೇಕು ಎಂಬ ಅಂಶವೂ ಮುಖ್ಯವಾಗಿ ಇರುತ್ತದೆ. ಅದು ದೇಶ ಕಟ್ಟಲು ಬೇಕಾದ ಅಗತ್ಯವಾದ ಉಪಕ್ರಮ. ಆದರೆ ನಮ್ಮ ದೇಶದಲ್ಲಿ ಹಾಗಲ್ಲ. ಚುನಾವಣೆ ಎಂದರೆ ಸಾಕು ಜನರ ಭಾವನೆಗಳಿಗೆ ಒತ್ತುಕೊಡುವುದೇ ಹೆಚ್ಚು. ಧರ್ಮಕ್ಕೆ ಗಂಡಾಂತರ ಒದಗಿದೆ ಎನ್ನುತ್ತದೆ ಒಂದು ಪಕ್ಷ, ದೇವಸ್ಥಾನ ಕಟ್ಟಬೇಕು ಎನ್ನುತ್ತದೆ. ಅದರ ಬಾಲಬಡುಕ ಸಂಘಟನೆಗಳಿಗೆ ಅಷ್ಟು ಸಾಕು. ಈ ದೇಶದ ಉದ್ಧಾರ ದೇವರಿಂದ ಮಾತ್ರ ಸಾಧ್ಯ ಎಂದು ನಂಬಿರುವ ಹಾಗೆ ವರ್ತಿಸುತ್ತವೆ. ಗೆದ್ದ ಮೇಲೆ ದೇಶ ನಡೆಸುವ ನಾಯಕರ ಸಾಧನೆಗಳು ಮಸುಕಾಗುವಂತೆ ಇವರ ದೊಂಬರಾಟಗಳೇ ಮೇಲುಗೈ ಪಡೆಯುತ್ತವೆ, ಸುದ್ದಿಯಾಗುತ್ತವೆ. ಆಳುವ ವರ್ಗ ಅಭಿವೃದ್ಧಿ ಎಂದು ಜಪಿಸಿದರೂ ಅದರ ಮಾನದಂಡಗಳೇನು ಎಂಬುದು ತನಗೇ ಸ್ಪಷ್ಟವಾಗಿರುವಂತೆ ಕಾಣುವುದಿಲ್ಲ. ಅದೊಂದು ಮಂತ್ರದಂಡ ಎಂದು ತಿಳಿದುಕೊಂಡು ಮಾಡುವ ಅತಿರಂಜಿತ ಪ್ರಯೋಗಗಳು ಮುಗ್ಗರಿಸುತ್ತವೆ.

ಇನ್ನೊಂದು ಪಕ್ಷ ದಮನಿತರು, ಅಲ್ಪಸಂಖ್ಯಾತರಿಗೆ ಅನ್ಯಾಯವಾಗುತ್ತಿದೆ ಎಂದು ಟೊಂಕ ಕಟ್ಟಿ ನಿಲ್ಲುತ್ತದೆ. ನೈಜ ಸಮಸ್ಯೆಗಳನ್ನು ಗುರುತಿಸಿ ಅಭಿವೃದ್ಧಿ ಮಾದರಿಗಳನ್ನು ವಿಶ್ಲೇಷಿಸುವ ಗೋಜಿಗೆ ಹೋಗುವುದಿಲ್ಲ. ಆದ್ದರಿಂದ ನನ್ನ ಪ್ರಕಾರ ಈ ದೇಶದಲ್ಲಿ ಇರುವುದು ಎರಡೇ ಪಕ್ಷಗಳು. ಒಂದು ಮುಸಲ್ಮಾನರನ್ನು ವಿರೋಧಿಸುವ ಪಕ್ಷ, ಇನ್ನೊಂದು ಮುಸಲ್ಮಾನರ ಪರವಾಗಿರುವ ಪಕ್ಷ. ಇವುಗಳ ಪ್ರಣಾಳಿಕೆ ಏನೆಂದರೆ ಓಟುಗಳನ್ನು ಭದ್ರಪಡಿಸಿಕೊಳ್ಳುವುದು. ಇವರು, ನಡೆವ ಹಾದಿಯಲ್ಲಿ ಸಿಕ್ಕ ಫಲಗಳನ್ನೇ ಅಭಿವೃದ್ಧಿ ಎಂದು ತೋರಿಸಿಕೊಳ್ಳುವುದಾಗಿದೆ ಅಷ್ಟೆ. ಇಲ್ಲದಿದ್ದರೆ ಇಷ್ಟೊಂದು ಮಾನವ ಸಂಪನ್ಮೂಲ ಇರುವ ದೇಶ ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಸೂಚ್ಯಂಕದಲ್ಲಿ ನೂರನೆಯ ಸ್ಥಾನದಲ್ಲಿರುತ್ತಿರಲಿಲ್ಲ. ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ 95 ಕೋಟಿ ಜನರಿಗೆ ಬಯಲೇ ಶೌಚಾಲಯ ಎಂದು ಅಂದಾಜಿಸಲಾಗಿದೆ. ಅದರಲ್ಲಿ 56 ಕೋಟಿ ಜನರು ಭಾರತದಲ್ಲಿಯೇ ಇದ್ದಾರೆ. ಇದು ನಮ್ಮ ರಾಜಕೀಯ ಪಕ್ಷಗಳಿಗೆ ನಾಚಿಕೆ ಪಟ್ಟುಕೊಳ್ಳುವ ವಿಷಯವಾಗಿ ಉಳಿದಿಲ್ಲ.

ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಬಾಬಾಸಾಹೇಬ್ ಅಂಬೇಡ್ಕರ್ ಶಿಕ್ಷಣವು ಮೂಲಭೂತ ಹಕ್ಕಾಗಿರಬೇಕೆಂದು ಬಯಸಿ ಅದರ ಕರಡನ್ನು ಶಿಕ್ಷಣದ ಉಪಸಮಿತಿಗೆ ಕಳಿಸಿದ್ದರು. ಸರ್ದಾರ್ ವಲ್ಲಭಾಯ್ ಪಟೇಲ್ ಅಧ್ಯಕ್ಷರಾಗಿದ್ದ ಆ ಸಮಿತಿಯು ಸಂಪನ್ಮೂಲ ಕೊರತೆಯಿಂದ ಅದು ಸದ್ಯಕ್ಕೆ ಸಾಧ್ಯವಿಲ್ಲ ಎಂದು ತಿರಸ್ಕರಿಸಿತಂತೆ. ಉಪವಾಸವಿದ್ದರೂ ಸರಿ ಮುಂದಿನ ಜನಾಂಗ ಶಿಕ್ಷಿತರಾಗಬೇಕು ಎಂಬ ಛಲವಿದ್ದಿದ್ದರೆ ಮಕ್ಕಳಿಗೆ ಹದಿನಾಲ್ಕನೆಯ ವಯಸ್ಸಿನವರೆಗೆ ಉಚಿತ ಶಿಕ್ಷಣವನ್ನು ಅಂದೇ ಕಡ್ಡಾಯ ಮಾಡಬಹುದಾಗಿತ್ತು. ಅದು ಮೂಲಭೂತ ಹಕ್ಕಾಗಲು 50 ವರ್ಷಗಳು ಕಾಯಬೇಕಾಯಿತು. 1911ರಲ್ಲಿಯೆ ಬ್ರಿಟಿಷ್ ಸರ್ಕಾರ ಅದನ್ನು ಮಾಡಲು ಮುಂದಾದಾಗ ಅನೇಕ ಪ್ರಾಂತೀಯ ರಾಜರುಗಳು ಸಹಸ್ರಾರು ಸಂಖ್ಯೆಯಲ್ಲಿ ಸಹಿ ಸಂಗ್ರಹಿಸಿ, ಎಲ್ಲರೂ ವಿದ್ಯಾವಂತರಾದರೆ ಹೊಲ ಉಳುವವರು, ರೈತಾಪಿ ದುಡಿಮೆ ಮಾಡುವವರು ಯಾರು? ಎಂದು ಕೇಳಿ ಅರ್ಜಿ ಗುಜರಾಯಿಸಿದ್ದರಂತೆ! ಈಗ ಸರ್ದಾರ್ ಪಟೇಲರನ್ನು ಭಾರತವನ್ನು ಒಗ್ಗೂಡಿಸಿದವರು ಎಂದು ಬಿಂಬಿಸಲಾಗುತ್ತಿದೆ. ಭಾರತದ ಇಂದಿನ ಭೂಪಟಕ್ಕೆ ಹೊಲಿಗೆ ಹಾಕಿದವರು 563 ಸಣ್ಣ ಪುಟ್ಟ ಪ್ರಾಂತ್ಯಗಳನ್ನು ಒಂದೊಂದಾಗಿ ವಶಪಡಿಸಿಕೊಳ್ಳುತ್ತಾ ಒಂದೇ ಆಡಳಿತಕ್ಕೆ ಒಳಪಡಿಸಿದವರು ಬ್ರಿಟಿಷರು ಎಂಬುದನ್ನು ಮರೆಮಾಚುವುದು ಇದರ ಉದ್ದೇಶವಿರಬಹುದು. ಮೇಲಾಗಿ ಕಾಶ್ಮೀರವು ಭಾರತಕ್ಕೆ ಸೇರ್ಪಡೆಗೊಳ್ಳುವುದು ಪಟೇಲರಿಗೆ ಇಷ್ಟವಿರಲಿಲ್ಲ. ಅದು ರಕ್ತಪಾತಕ್ಕೆ ದಾರಿಯಾಗುತ್ತದೆ ಎಂದು ಹೇಳಿದ್ದರು. ಗೃಹಮಂತ್ರಿಯಾಗಿ ನಿಜಾಮರ ಸರ್ಕಾರವನ್ನು ಸೈನ್ಯದ ಮುಖಾಂತರ ಮಣಿಸಿದ್ದು ಸಾಹಸವೆ?

ಈಗ ಬ್ರಿಟಿಷರೊಂದಿಗೆ ನೇರವಾಗಿ ಸೆಣಸಿ ಯುದ್ಧದಲ್ಲಿ ಮಡಿದ ಟೀಪು ಸುಲ್ತಾನ್ ಕೆಲವರ ಕಣ್ಣಲ್ಲಿ ಖಳನಾಯಕನಾಗಿದ್ದಾನೆ. ಅವನು ಸ್ವಾತಂತ್ರ್ಯಕ್ಕಾಗಿ ಹೋರಾಡಲಿಲ್ಲ, ತನ್ನ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳಲು ಹೋರಾಡಿದ ಎಂಬಂಥ ಬಾಲಿಶ ಹೇಳಿಕೆಗಳನ್ನು ಕೆಲವು ಘನವಿದ್ವಾಂಸರು ನೀಡುತ್ತಿದ್ದಾರೆ. ಅಂದಿಗೆ ಸಲ್ಲುವಂತೆ ಎಲ್ಲ ರಾಜರು ತಮ್ಮ ತಮ್ಮ ರಾಜ್ಯಗಳಿಗಾಗಿಯೆ ಹೋರಾಡುತ್ತಿದ್ದರು ಅಥವಾ ಮಣಿದು ಬ್ರಿಟಿಷರಿಗೆ ಕಪ್ಪ ಕಟ್ಟುತ್ತಿದ್ದರು. ಅಸ್ತಿತ್ವದಲ್ಲಿ ಇಲ್ಲದೇ ಇದ್ದ ಅಖಂಡ ಭಾರತದ ಸ್ವಾತಂತ್ರ್ಯಕ್ಕೆ ಅವರು ಹೇಗೆ ಹೋರಾಡಬೇಕಾಗಿತ್ತು. ಬಾಲ್ಯದ ಶಿಕ್ಷಣದಲ್ಲಿ ಮಕ್ಕಳಿಗೆ ತಮ್ಮ ಪರಂಪರೆ, ಇತಿಹಾಸ ಮತ್ತು ನೈತಿಕ ಜವಾಬ್ದಾರಿಗಳ ಕುರಿತು ಪಾಠಗಳಿರಬೇಕು. ಆಗ ಇಂತಹ ಸಮಸ್ಯೆಗಳು ಉದ್ಭವಿಸಲಾರವು. ಹೀಗೆ ಸುಳ್ಳನ್ನು ಬಿತ್ತಿ ಭ್ರಮೆಗಳ ಬೆಳೆ ತೆಗೆಯುತ್ತಿರುವ ಒಂದು ಉದ್ಯಮವೆ ತಲೆ ಎತ್ತಿ ನಿಂತಿದೆ. ಇತಿಹಾಸವನ್ನು ಹೊಸದಾಗಿ ಬರೆಯಲು ಯತ್ನಿಸುತ್ತಿರುವವರು ಕೆಳವರ್ಗದ ಜನರು ಶಿಕ್ಷಿತರಾಗುತ್ತಿರುವ ಈ ಕಾಲಮಾನದಲ್ಲಿ ಮೌಢ್ಯ ಮತ್ತು ದರ್ಮಾಂಧತೆಯನ್ನು ಬಿತ್ತುವುದರಿಂದ ಆಗುವ ದೂರ ಪರಿಣಾಮಗಳ ಬಗ್ಗೆ ಎಚ್ಚೆತ್ತುಕೊಳ್ಳುವ ಅವಶ್ಯಕತೆ ಇದೆ.

■ **ಮೂಚಿ**

## ಮಾತೇ ಮುತ್ತು

★ ಹೇಳಿದರೆ ಮರೆತುಬಿಡುತ್ತೇನೆ. ತೋರಿಸಿದರೆ ನೆನಪಿಟ್ಟುಕೊಳ್ಳಬಹುದು. ನನ್ನನ್ನೂ ಜತೆಗೆ ಸೇರಿಸಿಕೊಂಡರೆ ಖಂಡಿತಾ ಅರ್ಥ ಮಾಡಿಕೊಳ್ಳುತ್ತೇನೆ.

-ಚೀನಾದ ಗಾದೆ

★ ಮಕ್ಕಳ ಶಿಕ್ಷಣದ ಬಗ್ಗೆ ಮಾತ್ರ ತನಗೆ ಜವಾಬ್ದಾರಿ ಇದೆ ಎಂದು ಸಮಾಜ ಏಕೆ ತಿಳಿದುಕೊಳ್ಳಬೇಕು? ದೊಡ್ಡವರ ಶಿಕ್ಷಣದ ಬಗ್ಗೆಯೂ ಸಮಾಜಕ್ಕೆ ಜವಾಬ್ದಾರಿ ಇದೆ.

-ಎರಿಕ್ ಫ್ರಾಮ್

★ ನಿಮ್ಮ ಹೆಬ್ಬಯಕೆಗಳನ್ನು ನಿರುತ್ತೇಜಿಸುವ ಜನರಿಂದ ದೂರವಿರಿ. ನಿಜಕ್ಕೂ ಶ್ರೇಷ್ಠ ಮನುಷ್ಯರು ಮಾತ್ರ ನೀವೂ ಶ್ರೇಷ್ಠರಾಗಬಲ್ಲಿರಿ ಎಂದು ಪ್ರೋತ್ಸಾಹ ನೀಡುತ್ತಾರೆ.

-ಮಾರ್ಕ್ ಟ್ವೈನ್

★ ಮಕ್ಕಳು ಹಿರಿಯರು ಹೇಳಿದ್ದನ್ನು ಆಲಿಸುವುದರಲ್ಲಿ ಯಾವತ್ತೂ ಚುರುಕಾಗಿರುವುದಿಲ್ಲ. ಆದರೆ ಹಿರಿಯರನ್ನು ಅನುಕರಿಸುವಲ್ಲಿ ಯಾವತ್ತೂ ವಿಫಲರಾಗುವುದಿಲ್ಲ.

-ಜೇಮ್ಸ್ ಬಾಲ್ಡ್ವಿನ್

★ ಸುಶಿಕ್ಷಿತ ಮನಸ್ಸಿನಲ್ಲಿ ಉತ್ತರಗಳಿಗಿಂತ ಹೆಚ್ಚು ಪ್ರಶ್ನೆಗಳೇ ತುಂಬಿರುತ್ತವೆ.

-ಹೆಲೆನ್ ಕೆಲ್ಲರ್

★ ಬುದ್ಧಿವಂತರ ಗುರಿ ಸಂತೋಷವನ್ನು ಹೊಂದುವುದಲ್ಲ, ನೋವುಗಳನ್ನು ದೂರ ಮಾಡುವುದು.

-ಅರಿಸ್ಟಾಟಲ್

★ ಅನುಭವ ಪುಕ್ಕಟೆ ಬರುವುದಿಲ್ಲ. ಅದಕ್ಕಾಗಿ ಏನನ್ನಾದರೂ ಖರ್ಚು ಮಾಡಬೇಕು.

-ಆಸ್ಕರ್ ವೈಲ್ಡ್

★ ಒಳ್ಳೆಯದನ್ನು ವರ್ಣಿಸುವಾಗ ಮಾತು ಹೆಚ್ಚಾಗಲಿ, ಅಲ್ಲದನ್ನು ಹೇಳುವಾಗ ಮಾತು ಕಡಿಮೆಯಾಗಲಿ.

-ಬಿ.ಎಂ.ಶ್ರೀ

★ ಕೈಲಾದವನು ಮಾಡಿ ತೋರಿಸುತ್ತಾನೆ. ಕೈಲಾಗದವನು ಉಪದೇಶ ಮಾಡುತ್ತಾನೆ.

-ಜಾರ್ಜ್ ಬರ್ನಾರ್ಡ್ ಷಾ

★ ಇನ್ನೊಬ್ಬರಿಗೆ ಒಳಿತು ಮಾಡಿದಷ್ಟೂ ನಮ್ಮ ಹೃದಯ ಶುದ್ಧವಾಗುತ್ತದೆ. ದೇವರು ನಮಗೆ ಹತ್ತಿರವಾಗುತ್ತಾನೆ.

-ಸ್ವಾಮಿ ವಿವೇಕಾನಂದ